ಅಧ್ಯಕ್ಷರು :- ಪ್ರಶ್ನೋತ್ತರದ ಅವಧಿ ಆದ ಮೇಲೆ ತೆಗೆದುಕೊಳ್ಳೋಣ. ಈಗ ಯಾರು ಏನೇ ಮಾತನಾಡಿದರೂ don't take down.

(ಗೊಂದಲ)

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಹಕ್ಕುಚ್ಯುತಿ ಪ್ರಸ್ತಾವನೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೇ, ನಮ್ಮದೊಂದು ಹಕ್ಕುಚ್ಯುತಿ ಪ್ರಸ್ತಾವನೆ ಇದೆ. ಅದನ್ನು ಮಂಡನೆ ಮಾಡುವುದಕ್ಕೇ ನಮಗೆ ಹಕ್ಕು ಇಲ್ಲದಂತಾಗಿದೆ. ಅದರ ಬಗ್ಗೆ ಪ್ರಸ್ತಾಪಿಸಲು ಅನುಮತಿ ಕೋರಿ ಈಗಾಗಲೇ 15 ದಿವಸಗಳಾಯಿತು. ನಾವು ಹಕ್ಕುಚ್ಯುತಿ ಮಂಡಿಸುವ ನಮ್ಮ ಹಕ್ಕನ್ನು ಕೊಡಿ ಎಂದು ನಿಮ್ಮನ್ನು ಕೇಳಿಕೊಳ್ಳಬೇಕಾದ ಸ್ಥಿತಿ ಬಂದಿದೆ. ದಯಮಾಡಿ ತಾವು ಅದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- ಅದನ್ನೂ ಕೂಡ question hour ಆದಮೇಲೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ನಡೆಯಲಿ, ಯಾವುದೇ ಕಾರಣಕ್ಕೂ ನಾವು ಪ್ರಶ್ನೋತ್ತರದ ವೇಳೆಯನ್ನು ಕಳೆದುಕೊಳ್ಳಬಾರದು. ಇಲ್ಲಿ ಪ್ರಶ್ನೆ ಏನಿದೆ ಎಂದರೆ, ನಮ್ಮ ಸದಸ್ಯರಾಗಿರತಕ್ಕಂಥ ಮಾನ್ಯ ಕೆ.ಬಿ. ಮಲ್ಲಿಕಾರ್ಜುನ ಮತ್ತು ಮಾನ್ಯ ಜಯಪ್ರಕಾಶ್ ಹೆಗಡೆಯವರು ತಮ್ಮ ಹಕ್ಕಿಗೆ ಧಕ್ಕೆ ಬಂದಿದೆ. ಚ್ಯುತಿ ಬಂದಿದೆ. ಅದರ ಬಗ್ಗೆ ಪ್ರಸ್ತಾಪಿಸಲು ನಮಗೆ ಅವಕಾಶ ಮಾಡಿಕೊಡಿ ಎಂದು ಅವರು ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆ ಹಕ್ಕುಚ್ಯುತಿ ಪ್ರಸ್ತಾವವನ್ನು ವಿಧಾನ ಸಭೆಯ ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸತಕ್ಕದ್ದು ಅಥವಾ ಬಿಡತಕ್ಕದ್ದು ತಮ್ಮ ಪರಮಾಧಿಕಾರ. ಅದಕ್ಕೆ ನಾವೆಲ್ಲಾ ತಲೆ ಬಾಗುತ್ತೇವೆ. ಆದರೆ, ಅವರು ಪ್ರಸ್ತಾವ ಮಂಡನೆ ಮಾಡಲಿಕ್ಕೂ ಸಹ ಅವಕಾಶ ಸಿಗಲಿಲ್ಲವೆಂದರೆ ಹೇಗೆ? ತಾವು ಅದಕ್ಕೊಂದು ಸಮಯ ನಿಗದಿ ಮಾಡಿ. ಅಸೆಂಬ್ಲಿ ಶನಿವಾರದವರೆಗೆ ಮಾತ್ರ ನಡೆಯಲಿದೆ. ಸೋಮವಾರದ ನಂತರ ಅಸೆಂಬ್ಲಿ adjourn ಆಗುತ್ತದೆ. ಆದುದರಿಂದ ದಯವಿಟ್ಟು ತಾವು ಯಾವುದಾದರೂ ಒಂದು ಸಮಯವನ್ನು ನಿಗದಿ ಪಡಿಸಿ ಮಾನ್ಯ ಸದಸ್ಯರುಗಳಿಗಿಬ್ಬರಿಗೂ ಅವರ ಹಕ್ಕುಚ್ಯುತಿ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ. ಬೇರೆ ವಿಚಾರವನ್ನು ಯಾವ ಸಂದರ್ಭದಲ್ಲಾದರೂ ಪ್ರಸ್ತಾಪಿಸಬಹುದು. ಆದರೆ ಹಕ್ಕುಚ್ಯುತಿಯ ವಿಚಾರ ಬಂದಾಗ ಅದನ್ನು ಆದ್ಯತೆ ಮೇಲೆ ಪ್ರಸ್ತಾಪಿಸಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- ಆಯಿತು, ಅದಕ್ಕೆ ಅವಕಾಶ ಕೋಡೋಣ. ಈಗ ಪ್ರಶ್ನೋತ್ತರ ಅವಧಿ.

3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮಾಜಿ ಪಟೇಲರಿಗೆ ಪಿಂಚಣಿ

222 (2251) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ಮಾಜಿ ಪಟೇಲರಿಗೆ ಪಿಂಚಣಿ ಸಂದಾಯ ಮಾಡಲು ಕರ್ನಾಟಕ ಉಚ್ಚನ್ಯಾಯಾಲಯ ಆದೇಶ ನೀಡಿದೆಯೆ;